# ಕರ್ನಾಟಕ ವಿಧಾನ ಪರಿಷತ್ತು

| | | |
|---|---|---|
| ಚುಕ್ಕೆ ಗುರುತಿಲ್ಲದ ಪ್ರಶ್ನೆ ಸಂಖ್ಯೆ | : | 281 |
| ಸದಸ್ಯರ ಹೆಸರು | : | ಶ್ರೀ ಪ್ರಕಾಶ್ ಕೆ. ರಾಥೋಡ್<br>(ನಾಮ ನಿರ್ದೇಶನ ಹೊಂದಿದವರು) |
| ಉತ್ತರಿಸುವ ದಿನಾಂಕ | : | 21-12-2022 |
| ಉತ್ತರಿಸುವ ಸಚಿವರು | : | ಲೋಕೋಪಯೋಗಿ ಸಚಿವರು |

| ಕ್ರಮ ಸಂಖ್ಯೆ | ಪ್ರಶ್ನೆಗಳು | ಉತ್ತರ |
|---|---|---|
| ಅ) | ಜೇವರ್ಗಿ ಸಂಕೇಶ್ವರ ರಸ್ತೆಯನ್ನು ರಾಷ್ಟ್ರೀಯ ಹೆದ್ದಾರಿಯನ್ನಾಗಿ ಪರಿವರ್ತಿಸಲಾಗಿದೆಯೇ: | ಭಾರತೀಯ ರಾಷ್ಟ್ರೀಯ ಹೆದ್ದಾರಿ ಪ್ರಾಧಿಕಾರ (NHAI) ರವರು ವರದಿಸಿರುವಂತೆ ರಾಷ್ಟ್ರೀಯ ಹೆದ್ದಾರಿ-50 ಜೇವರ್ಗಿ ದಿಂದ ವಿಜಯಪುರ ವರೆಗೆ ಇವರ ಕಾರ್ಯವ್ಯಾಪ್ತಿಗೆ ಒಳಪಟ್ಟಿರುತ್ತದೆ. ಹಾಗೂ ಈ ರಸ್ತೆಯು ರಾಷ್ಟ್ರೀಯ ಹೆದ್ದಾರಿ ಎಂದು ಕೇಂದ್ರ ಸರಕಾರದ ಗೆಜೆಟ್ ಅಧಿಸೂಚನೆ S.O.No.242(ಇ) ದಿನಾಂಕಃ 25-02-2004ರ ಪ್ರಕಾರ ರಾಷ್ಟ್ರೀಯ ಹೆದ್ದಾರಿಯನ್ನಾಗಿ ಪರಿವರ್ತಿಸಿ ಘೋಷಿಸಲಾಗಿದೆ.<br><br>ಮುಂದುವರೆದು, ರಾಷ್ಟ್ರೀಯ ಹೆದ್ದಾರಿ ವಲಯ ವ್ಯಾಪ್ತಿಯ ಭಾಗವಾದ ವಿಜಯಪುರ ದಿಂದ ಸಂಕೇಶ್ವರ ವರೆಗೆ (ವಿಜಯಪುರದಿಂದ ಗೋಟೂರ ವರೆಗೆ) ರಾಷ್ಟ್ರೀಯ ಹೆದ್ದಾರಿ ನಂ.548ಬಿ ಎಂದು ಕೇಂದ್ರ ಸರಕಾರದ ಗೆಜೆಟ್ ಅಧಿಸೂಚನೆ S.O.No.5322(ಇ) ದಿನಾಂಕಃ 21-12-2021ರ ಪ್ರಕಾರ ರಾಷ್ಟ್ರೀಯ ಹೆದ್ದಾರಿ ಯನ್ನಾಗಿ ಪರಿವರ್ತಿಸಿ ಘೋಷಿಸಲಾಗಿದೆ. |
| ಆ) | ರಾಷ್ಟ್ರೀಯ ಹೆದ್ದಾರಿ ನಿರ್ಮಾಣ ಮಾಡಲು ಎಷ್ಟು ಭೂಮಿಯನ್ನು ವಶಪಡಿಸಿಕೊಳ್ಳಲಾಗಿದೆ: (ವಿವರ ನೀಡುವುದು) | ಭಾರತೀಯ ರಾಷ್ಟ್ರೀಯ ಹೆದ್ದಾರಿ ಪ್ರಾಧಿಕಾರ (NHAI) ರವರು ವರದಿಸಿರುವಂತೆ ರಾಷ್ಟ್ರೀಯ ಹೆದ್ದಾರಿ-50 ಜೇವರ್ಗಿ ದಿಂದ ವಿಜಯಪುರ ವರೆಗೆ ಮರು ಜೋಡಣೆ ಭಾಗವನ್ನು ಹೊರತುಪಡಿಸಿ ಈಗಾಗಲೇ ಇರುವ Right of Way ನಲ್ಲಿ ಸದರಿ ಹೆದ್ದಾರಿಯನ್ನು ಗಟ್ಟಿ ಬಾಹುಗಳುಳ್ಳ ದ್ವಿಪಥ ರಸ್ತೆಯನ್ನಾಗಿ ಅಭಿವೃದ್ಧಿಪಡಿಸಲಾಗಿದೆ. ಸದರಿ ಕಾಮಗಾರಿಯ ಜೇವರ್ಗಿ-ಶಹಾಪೂರ ಭಾಗದಲ್ಲಿನ ಮರುಜೋಡಣೆ ಬೈಪಾಸ್ ಮತ್ತು ಟೋಲ್ ಪ್ಲಾಜಾ ಕಾಮಗಾರಿಗಾಗಿ 44 ಹೆಕ್ಟೇರ್ ಭೂಮಿಯನ್ನು ಸ್ವಾಧೀನಪಡಿಸಿಕೊಳ್ಳಲಾಗಿದೆ ಎಂದು ವರದಿಸಿರುತ್ತಾರೆ.<br><br>ವಿಜಯಪುರ ದಿಂದ ಮುರಗುಂಡಿ ವರೆಗೆ ರಾಷ್ಟ್ರೀಯ ಹೆದ್ದಾರಿ ನಿರ್ಮಾಣ ಮಾಡಲು ವಿಜಯಪುರ ಜಿಲ್ಲೆಯ 6.46 ಹೆಕ್ಟರ್ ಹಾಗೂ ಬೆಳಗಾವಿ ಜಿಲ್ಲೆಯ 11.49 ಹೆಕ್ಟರ್ ಭೂಮಿಯನ್ನು ವಶಪಡಿಸಿಕೊಳ್ಳ ಬೇಕಾಗಿರುತ್ತದೆ. 3D ಅಧಿಸೂಚನೆಯನ್ನು ಪ್ರಕಟಿಸಲು ಪ್ರಸ್ತಾವನೆಯನ್ನು ಪ್ರಾದೇಶಿಕ ಕಛೇರಿ, ಭೂ-ಸಾರಿಗೆ ಮಂತ್ರಾಲಯ ಬೆಂಗಳೂರು ಇವರಿಗೆ ಸಲ್ಲಿಸಲಾಗಿದೆ.<br><br>ಮುರಗುಂಡಿಯಿಂದ ಸಂಕೇಶ್ವರ ರಸ್ತೆಗೆ 120 ಹೆಕ್ಟರ್ ಭೂ-ಸ್ವಾಧೀನ ಅವಶ್ಯಕತೆ ಇದ್ದು, ಭೂ-ಸ್ವಾಧೀನಪಡಿಸಿಕೊಳ್ಳುವ ಸಕ್ಷಮ |